ಅ) 1) ಡಿಜಿಪಿ:ಅಡಿಷನಲ್ ಡಿಜಿಪಿ:ಐಜಿಪಿ -1 ಹೆಚ್‌ಸಿ, 3 ಪಿಸಿ.

2) ಪೋಲೀಸ್ ಕಮೀಷನರ್ ಹಾಗೂ ಡಿಐಜಿಪಿ ರವರಿಗೆ -1 ಹೆಚ್‌ಸಿ, 2 ಪಿಸಿ.

3) ಎಸ್‌ಪಿ ಮತ್ತು ತತ್ಸಮಾನ ಹುದ್ದೆ - 3 ಪಿಸಿ.

4) ಡಿವೈ. ಎಸ್‌ಪಿ ಮತ್ತು ತತ್ಸಮಾನ ಹುದ್ದೆ -2 ಪಿಸಿ

5) ಪೋಲೀಸ್ ಇನ್ಸ್‌ಪೆಕ್ಟರ್ ಮತ್ತು ತತ್ಸಮಾನ ಹುದ್ದೆ -1 ಪಿಸಿ.

ಇ) ಈ ಮೇಲಿನ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ.

ಈ) ರಾಜ್ಯಾದ್ಯಂತ ಕರ್ನಾಟಕ ರಾಜ್ಯವು ಸೇರಿದಂತೆ ಬೇರೆ ಯಾವ ರಾಜ್ಯಗಳ ಒಂದಂಕಿ ಲಾಟರಿಯನ್ನು ನಡೆಸದಂತೆ ನಿಷೇಧಿಸಲಾಗಿದೆ.

ಉ) ಕ್ಯಾಬರೆ, ಜುಗಾರಿ ಕಟ್ಟಾ ರೌಡಿಗಳ ಚಟುವಟಿಕೆಯನ್ನು ರಾಜ್ಯದಾದ್ಯಂತ ಬಹುತೇಕ ನಿಯಂತ್ರಿಸಲಾಗಿದೆ. 1993ನೇ ಸಾಲಿನಲ್ಲಿ 797, 1994ರಲ್ಲಿ 1431 ಹಾಗೂ 1995ನೇ ಫೆಬ್ರವರಿ ಅಂತ್ಯದವರೆಗೆ 518 ಮಟ್ಕಾ ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದೆ. ಇದೇ ರೀತಿ ಗೂಂಡಾಗಿರಿ ಆರೋಪದ ಮೇಲೆ ಬೆಂಗಳೂರು ನಗರದಲ್ಲಿ 316, ಮೈಸೂರು ನಗರದಲ್ಲಿ 120 ಗೂಂಡಾ ವ್ಯಕ್ತಿಗಳನ್ನು ಬಂಧಿಸಿ ಕ್ರಮ ಕೈಗೊಳ್ಳಲಾಗಿದೆ.

ಕ್ಯಾಬರೆಗೆ ಸಂಬಂಧಿಸಿದಂತೆ ಬೆಂಗಳೂರು ನಗರದಲ್ಲಿ 10 ಪ್ರಕರಣಗಳನ್ನು ದಾಖಲಿಸಿಕೊಂಡು ಕ್ರಮ ಕೈಗೊಂಡಿದೆ.

ಮಟ್ಕಾ ಮತ್ತು ಜೂಜಾಟವನ್ನು ತಡೆಗಟ್ಟುವ ಸಲುವಾಗಿ ರಾಜ್ಯದಾದ್ಯಂತ ವಿಶೇಷ ದಾಳಿಯನ್ನು ನಡೆಸಲಾಗುತ್ತಿದೆ.

ಊ) ಈ ಪ್ರಶ್ನೆ ಗೃಹ ಸಚಿವರಿಗೆ ಸಂಬಂಧಪಡುವುದಿಲ್ಲ.

ಸಾರ್ವಜನಿಕರು ಧ್ವನಿವರ್ದಕಗಳನ್ನು ಬಳಸುವುದರ ಬಗ್ಗೆ

228 - ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕರು ವಿವೇಚನೆಯಿಲ್ಲದೇ ಧ್ವನಿವರ್ಧಕಗಳನ್ನು ಬಳಸುವ ಬಗ್ಗೆ ಸರಹದ್ದಿನ ಪೋಲೀಸರು ಪೋಲೀಸ್ ಕಾಯಿದೆಯನ್ನು ಬಳಸಿ, ಸೂಕ್ತ ಕ್ರಮ ತೆಗೆದುಕೊಳ್ಳುತ್ತಿಲ್ಲ ಎಂಬ ವಿಷಯವು ನಿಜವೇ;

ಆ) ಧಾರ್ಮಿಕ ಸಂಸ್ಥೆಗಳು ಧ್ವನಿವರ್ಧಕಗಳನ್ನು ಹಗಲು ರಾತ್ರಿ ಬಳಸಲು ಪೋಲೀಸ್ ಕಾಯಿದೆಯಲ್ಲಿ ಯಾವುದೇ ರಿಯಾಯಿತಿಗಳಿವೆಯೇ;

ಇ) ಪೋಲೀಸ್ ಕಾಯ್ದೆಯನ್ವಯ, ಧ್ವನಿವರ್ಧಕಗಳನ್ನು ವಿವೇಚನೆಯಿಲ್ಲದೆ ಬಳಕೆ ನಿಯಂತ್ರಿಸಲು, ಶಿಸ್ತಿನ ಕ್ರಮವನ್ನು ಪೋಲೀಸರು ಆಚರಿಸುತ್ತಿದ್ದಾರೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹಮಂತ್ರಿಗಳು) :

ಅ) ಇಲ್ಲ.

ಆ) ಧಾರ್ಮಿಕ ಸಂಸ್ಥೆಗಳಿಗೆ ಪೋಲೀಸ್ ಕಾಯ್ದೆ, 1963ರ ನಿಯಮ 37ರ ಅಡಿಯಲ್ಲಿ ವಿನಾಯಿತಿ ಇರುವುದಿಲ್ಲ. ಧ್ವನಿವರ್ಧಕಗಳನ್ನು ರಾತ್ರಿ 10 ರಿಂದ ಬೆಳಿಗ್ಗೆ 6ರವರೆಗೆ ಬಳಸಬಾರದೆಂಬ ಷರತ್ತಿನೊಂದಿಗೆ ಪರವಾನಗಿ ನೀಡಲಾಗುವುದು.

ಇ) ಪೋಲೀಸರು ಅವರ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಪೋಲೀಸ್ ಕಾಯ್ದೆ, 1963ರ ಅನ್ವಯವೇ ಕರ್ತವ್ಯ ನಿರ್ವಹಿಸಬೇಕಾಗುತ್ತದೆ ಹಾಗೂ ಅದರಂತೆ ಪೋಲೀಸರು ಕಡ್ಡಾಯವಾಗಿ ಪರವಾನಗಿಯ ಷರತ್ತಿನಂತೆ ಕಾಯ್ದೆಯನ್ನು ಜಾರಿಗೊಳಿಸಬೇಕೆಂದು ನಿರ್ದೇಶಿಸಿದೆ.

ಬೆಂಗಳೂರು ಪೂರ್ವ ಉತ್ತರ ಹಾಗೂ ದಕ್ಷಿಣ ವಲಯದ ಉಪ ಪೋಲೀಸ್ ಆಯುಕ್ತರುಗಳು ದುರ್ನಡತೆ

229 - ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಪೂರ್ವ, ಉತ್ತರ ಹಾಗೂ ದಕ್ಷಿಣ ವಲಯದ ಉಪ ಪೋಲೀಸ್ ಆಯುಕ್ತರುಗಳು ಭೂ ಕಬಳಿಕೆದಾರರುಗಳೊಂದಿಗೆ ಶಾಮೀಲಾಗಿ ಈ ಭೂ ಮಾಲೀಕರುಗಳು ನೀಡಿದ ದೂರಿನ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದೇ ಅಧಿಕಾರ (ದುರ್ನಡತೆ) ದುರುಪಯೋಗವನ್ನು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;*

ಆ) *ಈ ಅಧಿಕಾರಿಗಳು ತಮ್ಮ ಅಧೀನ ಸಿಬ್ಬಿಂದಿಯವರಿಗೆ ಅಪರಾಧಿಗಳ ವಿರುದ್ಧ ಯಾವುದೇ ಕ್ರಮವನ್ನು ಜರುಗಿಸಬಾರದೆಂದು ಅಥವಾ ತೆಗೆದುಕೊಳ್ಳಬಾರದೆಂದು ಸೂಚನೆಯನ್ನು ಹೊರಡಿಸಿರುವುದು ನಿಜವೇ;*

ಇ) *ದಿನಾಂಕ 12-3-95ರಂದು 'ಡೆಕ್ಕನ ಹೆರಾಲ್ಡ್' ಇಂಗ್ಲೀಷ್ ದಿನಪತ್ರಿಕೆಯಲ್ಲಿ ಅತಿರಿಕ್ತ ಪೋಲೀಸ್ ಆಯುಕ್ತರು, ಬೆಂಗಳೂರು ನಗರ ಇವರು ಈ ಉಪ ಪೋಲೀಸ್ ಆಯುಕ್ತರುಗಳು ಈ ಪ್ರಕರಣಗಳಲ್ಲಿ ಶಾಮೀಲಾಗಿರುವ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುತ್ತಾರೆಂದು ವರದಿ ಮಾಡಿರುವುದು ನಿಜವೇ, ಹಾಗಿದ್ದಲ್ಲಿ ಈ ಅಧಿಕಾರಿಗಳ ವಿರುದ್ಧ ಸರ್ಕಾರವು ತೆಗೆದುಕೊಳ್ಳಲು ಪ್ರಸ್ತಾವಿಸಿರುವ ಕ್ರಮಗಳೇನು;*

ಈ) *ಈ ಆಸ್ತಿಗಳ ನ್ಯಾಯಯುತ ಮಾಲೀಕರಿಗೆ ರಕ್ಷಣೆ ನೀಡಲು ಹಾಗೂ ಈ ಅಧಿಕಾರಿಗಳು ಶಾಮೀಲಾಗಿರುತ್ತಾರೆಂಬ ಆರೋಪದ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ.*

ಉ) *ಈ ವ್ಯವಹಾರಗಳಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಲು ಕಾರಣರಾದ ಅಧಿಕಾರಿಗಳ ಹಾಗೂ ಭೂ ಕಬಳಿಕೆದಾರರ ವಿರುದ್ಧ ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮಗಳೇನು;*